**ಸಂಬಂಧವೇನೋ ಕಡಿದುಹೋಯಿತು. ಪ್ರಸಾದರು ಗೆದ್ದೆ ಅಂದುಕೊಂಡರು. ಆದರೆ ಅವರ ಸ್ನೇಹಿತರು ಅವರ ವರ್ತನೆಯನ್ನು ಖಂಡಿಸಿದರು. ಈತನಿಗಾದರೋ ಗೀತಾ ದೂರವಾದರೆ ಸಾಕಾಗಿತ್ತು. ಮಿಕ್ಕವರ ಟೀಕೆ, ಬುದ್ಧಿವಾದ ಯಾವುದೂ ಬೇಕಿರಲಿಲ್ಲ.**

ಅಮೆರಿಕದಲ್ಲಿ ಕೆಲಸ ಕಂಡುಕೊಂಡಿದ್ದಳು. ಗೀತಾಳ ಬಗ್ಗೆ ತಾತ್ಸಾರ ಹುಟ್ಟಿತು. "ಹಾರಿತೆನ್ನ ಹೃದಯ ಭೃಂಗ ಬೇರೆ ಹೂವ ನೆರಳಿಗೆ, ಕೇಳಬೇಡ ಎಲ್ಲಿಗೆ."

ಈ ಹಿನ್ನೆಲೆಯಲ್ಲಿ ಪುಟ್ಟ ಘಟನೆಯೊಂದು ನಡೆದುಹೋಯಿತು. ಪ್ರಸಾದರ ಮನೆಯಲ್ಲಿ ಒಂದು ಭಾನುವಾರ ಬೆಳಗ್ಗೆ ಸತ್ಯನಾರಾಯಣ ಪೂಜೆ ನೆಡೆಸಿದರು. "ಅವಳೂ ಬರಲಿ, ಕರಿ" ಎಂದು ಅವರ ತಾಯಿ ಮಗನ ಮೂಲಕ ಆಹ್ವಾನವಿತ್ತರು. ಮಂಗಳಾರತಿಯೂ ಆಗಿ, ಊಟವೂ ಆಯಿತು, ಅವಳು ಪತ್ತೆಯಿಲ್ಲ. ಕಾರಣ ತಿಳಿಯಲು ಸಂಜೆ ಪ್ರಸಾದ್ ಅವಳ ಮನೆಗೆ ಧಾವಿಸಿ ಬಂದರು. ಬಾಗಿಲು ತೆರೆಯುತ್ತಲೇ ಅವಳ ತಂದೆ ಪ್ರಾರಂಭಿಸಿದರು, "ನೋಡಿ ಪ್ರಸಾದ್, ಬಹಳ ತಲೆನೋವು ಅಂತ ಮನೇಲೇ ಉಳಕೊಂಡು ಬಿಟ್ಟಳು." ನಂತರ ಗೀತಾ ಪ್ರತ್ಯಕ್ಷಳಾದಳು. ತಂದೆ ಜಾಗ ಖಾಲಿ ಮಾಡಿದರು.

"ತುಂಬಾ ತಲೆ ನೋವಾ?"

"ಹೂ ಹಾಗೇನೆ" ಅಂದವಳೇ ಅದೂ ಇದೂ ಮಾತನಾಡಿದ ನಂತರ ಬಾಯಿ ಬಿಟ್ಟಳು.

"ನಿಮ್ಮ ಹತ್ರ ಸುಳ್ಳು ಏಕೆ ಹೇಳಲಿ? ನನಗೆ ಈ ಗೊಡ್ಡು ಪೂಜೆ ಪುನಸ್ಕಾರ ಯಾವುದರಲ್ಲೂ ಆಸಕ್ತಿ ಇಲ್ಲ. ಬಂದರೆ ಬೋರ್ ಆಗ್ತಿತು. ಅದಕ್ಕೇ ಅಕ್ಕನ್ನ ಕರಕೊಂಡು ಮಾರ್ನಿಂಗ್ ಷೋಗೆ ಹೋಗಿಬಂದೆ," ಎಂದು ನಕ್ಕಳು.

ಪ್ರಸಾದರ ಮುಖ ಬೆಂಕಿಯಂತೆ ಕೆಂಪಾಯಿತು. ರೋಷ ಉಕ್ಕಿ ಬಂತು. ಪ್ರಾಯಶಃ ಅವರಿಬ್ಬರು ಮದುವೆಯಾಗಿ ಗಂಡ ಹೆಂಡತಿ ಆಗಿದ್ದರೆ ಎತ್ತಿ ಕಪಾಳಕ್ಕೆ ಹೊಡೆಯುತ್ತಿದ್ದರು. ಮರುಮಾತಾಡದೇ ಅಲ್ಲಿಂದ ಹೊರಟರು.

ತಮ್ಮ ಮನೆಗೆ ಹಿಂತಿರುಗಿದ ಪ್ರಸಾದ್ ಕುಳಿತು ಆಲೋಚನೆ ಮಾಡಲಾರಂಭಿಸಿದರು. "ನನ್ನ ಮಾತಿಗೆ ಬೆಲೆ ಕೊಡದ ಸ್ಥಿತಿ ಬಂತೇ ಹಾಗಾದರೆ? ಹಿಂದೆಯೇ ಒಮ್ಮೆ ಅಣ್ಣ ಅಮ್ಮನ ಬಗ್ಗೆ ಹಗುರವಾಗಿ ಮಾತನಾಡಿದ್ದಾಳೆ. ವರ್ತನೆಯಲ್ಲಿ ನಯ ವಿನಯ ಬೇಡವೇ? ಇದು ನಾನೇ ಮಾಡಿಕೊಂಡ ಕೆಲಸ. ಸದಾ ಅವಳ ಮನೆಗೆ ಹೋಗುತ್ತಿದ್ದುದರಿಂದ ಚೀಪ್ ಆದೆ ಅಂತ ಕಾಣುತ್ತೆ. ಈಗ ತೋರಿಸ್ತೀನಿ. ಅವಳಿಗೆ ಬುದ್ಧಿ ಕಲಿಸಬೇಕು. ಹೀಗೆಯೇ ಬಿಡಬಾರದು." ಅವರ ಆಲೋಚನೆ ಇನ್ನೂ ಮುಂದಕ್ಕೆ ಹೋಯಿತು. ಇವಳೇನು ಮಹಾ ಹುಡುಗಿ! ಅದೂ ಅಲ್ಲದೆ ಅಮ್ಮ ಅಣ್ಣ ಗೀತಾಳನ್ನು ಮನಸಾರೆ ಒಪ್ಪಿರಲಿಲ್ಲ. ಕೇವಲ ಇವರ ಬಲಾತ್ಕಾರಕ್ಕೆ ಬಲಿಯಾಗಿ ಹೂಂ ಎಂದಿದ್ದರು. ಹುಡುಗಿ ಓದಿಲ್ಲ, ಬರೆದಿಲ್ಲ ಎಂಬ ಕೊರತೆ ಇದ್ದೇ ಇತ್ತು. ಅತ್ತ ನೋಡಿದರೆ ವೀಣಾ ತಮ್ಮನ್ನೇ ಮೀರಿಸಿದ್ದಾಳೆ. ಅಮೆರಿಕಕ್ಕೆ ಬೇರೆ ಹೊರಟಿದ್ದಾಳೆ. ಅವಳಿಗೆ ಇನ್ನೂ ಮದುವೆ ಗೊತ್ತಾಗಿಲ್ಲ.

ಮನಸ್ಸು ಅಲ್ಲೋಲಕಲ್ಲೋಲವಾಯಿತು. ತಾವು ಗೀತಾಳನ್ನು ಮದುವೆಯಾದರೆ ದೊಡ್ಡ ತಪ್ಪು ಎಸಗಿದಂತೆ ಎಂದು ಭಾಸವಾಯಿತು. ಯಾರಿಗೂ ಈ ಬಗ್ಗೆ ಹೇಳಲಿಲ್ಲ. ಮನಸ್ಸಿನಲ್ಲಿಯೇ ಲೆಕ್ಕಾ ಹಾಕಿಕೊಂಡರು. ಇದರ ಜೊತೆಗೆ ಮತ್ತೊಂದು ಸಮಸ್ಯೆ ಹುಟ್ಟಿಕೊಂಡಿತ್ತು. ಅದು ಇವರ